ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ/ವಾರ್ಡ್ ಸಮಿತಿ ಸಹಾಯಕಅಭಿಯಂತರರಕಛೇರಿ ವಾರ್ಡ್ ಸಂಖ್ಯೆ: 136 ಜೆ.ಜೆ.ಆರ್ ನಗರ ಬೆಂಗಳೂರು

dt. 07-05-2022

ಸಂಖ್ಯೆ: w-136/Committee/Proceding -35/2021-22

## ಸಭೆಯ ನಡವಳಿಗಳು

ಶ್ರೀ ಸತೀಶ್ ಕುಮಾರ್ ಸಮಿತಿಯ ಕಾರ್ಯದರ್ಶಿಗಳು ಸಭೆಯನ್ನು ನಡೆಸುತ್ತಾ ಸಭೆಯಲ್ಲಿ ಉಪಸ್ಥಿತಗೊಂಡಿರುವ ಮಾನ್ಯ ನೋಡಲ್ ಆಧಿಕಾರಿಗಳಿಗೆ ಮತ್ತು ಉನ್ನತ ಸಭೆಯಲ್ಲಿ ಅಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಸಭೆಗೆ ಸ್ವಾಗತಕೋರಿದರು. ನಂತರ ಮಾನ್ಯ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು

ಮೊದಲಿಗೆ ಈ ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ಗಮನಹರಿಸುತ್ತಾ ಹಾಗೂ ಸಾರ್ವಜನಿಕರಿಂದ ಬಂದ ದೂರುಗಳನ್ನು ಪರಿಹರಿಸಿದ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಈ ವಿಷಯದ ಬಗ್ಗೆ ಮಾನ್ಯ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ ವ್ಯಾಪ್ತಿಯಲ್ಲಿ ಬಂದಂತಹ ದೂರುಗಳು ಟ್ರಾಕ್ಟರ್ ಮತ್ತು ಕೂಲಿ ಕಾರ್ಮಿಕರನ್ನು ಉಪಯೋಗಿಸಿಕೊಂಡು ತಕ್ಷಣ ದೂರುಗಳನ್ನು ಪರಿಶೀಲಿಸಿ ಕಾರ್ಯನಿರ್ವಹಿಸಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಮಾನ್ಯ ಸದಸ್ಯರುಗಳು ಹೆಚ್. ಬಿ. ಈ ಮುಖ್ಯರಸ್ತೆಯಲ್ಲಿ ನಿರ್ಮಾಣ ಮಾಡುತ್ತಿರುವ ಬಿ.ಬಿ.ಎಂ.ಪಿ ಬಹುಪಯೋಗಿ ಕಟ್ಟಡ ನಿರ್ಮಾಣದ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಈ ವಿಷಯದ ಬಗ್ಗೆ ಮಾನ್ಯ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ಅಂತಿಮ ಹಂತದ ಕಾಮಗಾರಿಯು ಪ್ರಗತಿಯಲ್ಲಿದ್ದು ಮುಂದಿನ ದಿನಗಳಲ್ಲಿ ಚಾಮರಾಜಪೇಟೆಯ ಇಲ್ಲ ಬಿ.ಬಿ.ಎಂ.ಪಿ ಕಛೇರಿಗಳನ್ನು ಒಂದೆಡೆಯಲ್ಲಿ ಸ್ಥಾಪಿಸಲು ಮೇಲಾಧಿಕಾರಿಗಳಿಗೆ ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

Scanned with CamScanner

ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಬಗ್ಗೆ ಸಭೆಯಲ್ಲಿ ವಿವರಣೆ ಮತ್ತು ಕೈಗೊಂಡಿರುವ ಕ್ರಮದ ಬಗ್ಗೆ ಸಭೆಯಲ್ಲಿ ವಿವರಣೆ ನೀಡಿದರು.

ಆರೋಗ್ಯ ಪರಿವೀಕ್ಷಕರು ವಾರ್ಡ್-136 ಕೋವಿಡ್-19 ನಾಲ್ಕನೇ ಅಲೆಯ ವೈರಸ್ ರೋಗಣುಗಳು ಹರಡುತ್ತಿರುವ ಬಗ್ಗೆ ಸಾರ್ವಜನಿಕರಲ್ಲಿ ಸರ್ಕಾರದ ಆದೇಶದಂತೆ ಜಾಗೃತಿ ಮೂಡಿಸುತ್ತಿದ್ದು ಹಾಗೂ ಮುಖಗವಚವನ್ನು ಧರಿಸುವುದನ್ನು ಖಡ್ಡಾಯ ಮಾಡಿರುವುದನ್ನು

ಸಾರ್ವಜನಿಕರಿಗೆ ತಿಳಿಸುತ್ತಿದ್ದು ಮುಂದಿನ ದಿನಗಳಲ್ಲಿ ಸರ್ಕಾರದ ಆದೇಶದಂತೆ ಮುಖಗವಚ ದರಿಸದೆ ಸಾರ್ವಜನಿಕ ಸ್ಥಳಗಳಲ್ಲಿ ತಿರುಗಾಡುತ್ತಿರುವವರಿಗೆ ನಿಯಮದಂತೆ ದಂಡ ವಿಧಿಸಲಾಗುವುದು.

ಸಾರ್ವಜನಿಕರು ಸೇರುವಂತಹ ಮಾಲ್ ಮತ್ತು ಚಿತ್ರಮಂದಿರಗಳಿಗೆ ಪ್ರವೇಶಿಸುವಂತಹ ಸಾರ್ವಜನಿಕರಿಗೆ 2 ಡೋಸ್ ಖಡ್ಡಯವಾಗಿರುತ್ತದೆ ಎಂದು ಸಾರ್ವಜನಿಕರಿಗೆ ತಿಳಿಸಲಾಗುವುದು.

12 ವರ್ಷದಿಂದ ಮೇಲ್ಪಟ್ಟ ಎಲ್ಲಾರಿಗೂ ಲಸಿಕೆಯನ್ನು ಸರ್ಕಾರದ ಮಾರ್ಗ ಸೂಚಿಯಂತೆ ನೀಡುತ್ತಿರುವುದನ್ನು ಸಭೆಯಲ್ಲಿ ತಿಳಿಸಿದರು ಹಾಗೂ ಬೂಸ್ಟರ್ ಡೋಸ್‌ಗಳನ್ನು ನೀಡುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಮಾನ್ಯ ಅಧ್ಯಕ್ಷರು ಬಿ.ಬಿ.ಎಂ.ಪಿ ಸಭೆಯಲ್ಲಿ ಹಾಜರಾಗಿದ್ದ ಕಂದಾಯ ನಿರೀಕ್ಷಕರನ್ನು ಹಿಂದಿ ತಿಂಗಳಿನಲ್ಲಿ ವಸೂಲತಿಯಾದ ತೆರಿಗೆಯ ಬಗ್ಗೆ ಸಭೆಯಲ್ಲಿ ಕೋರಿದರು.

ಮಾನ್ಯ ಕಂದಾಯ ನಿರೀಕ್ಷರು ವಾರ್ಡ್-136ರಲ್ಲಿ ವಸೂಲಾದ ತೆರಿಗೆ ಬಗ್ಗೆ ಸಭೆಯಲ್ಲಿ ತಿಳಿಸಿದ ಹಾಗೂ ಶೇ.5 ತೆರಿಗೆ ವಿನಾಯಿತಿಯನ್ನು ಇನ್ನು ಒಂದು ತಿಂಗಳು ವಿಸ್ತರಣೆ ಮಾಡಿರುವುದಾಗಿ ಸಭೆ ತಿಳಿಸಿದರು.

ಅಧ್ಯಕ್ಷರು ಬಿಡಬ್ಲೂಎಸ್‌ಎಸ್‌ಬಿ ಕಛೇರಿಗೆ ವಾರ್ಡ್ 136 ವ್ಯಾಪ್ತಿಗೆ ಸಂಬಂಧಿಸಿ ಬಂದ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ತಿಳಿಸುವಂತೆ ಸಭೆ ತಿಳಿಸಿದರು



Scanned with CamScanner

ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳು ವಾರ್ಡ್ 136 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು.

ಅಧ್ಯಕ್ಷರು ಸಹಾಯಕ ಕಾರ್ಯಪಾಲಕ ಅಭಿಯಂತರರು(ಘ.ತ್ಯಾ.ನಿ) ಚಾಮರಾಜಪೇಟೆ ರವರ ಪ್ರತಿನಿಧಿಯನ್ನು ವಾರ್ಡ್ ಘನ ತ್ಯಾಜ್ಯ ನಿರ್ವಹಣೆ, ಕಸ ವಿಲೇವಾರಿ, ಮತ್ತು ವಾಹನ ಮತ್ತು ಪೌರ ಕಾರ್ಮಿಕರ ಹಾಜರಾತಿ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ -136ರ ವ್ಯಾಪ್ತಿಯಲ್ಲಿ ಬರುವ ಗುತ್ತಿಗೆ ಪೌರ ಕಾರ್ಮಿಕರ ಮತ್ತು ವಾಹನಗಳ ಹಾಜರಾತಿ ಬಗ್ಗೆ ತಿಳಿಸಿದರು ಹಾಗೂ ಕೆಲವು ಕಡೆ ಬ್ಲಾಕ್ ಪಾಯಿಂಟ್‌ಗಳು ಅಪರಿಚಿತ ವ್ಯಕ್ತಿಗಳು ರಸ್ತೆಯಲ್ಲಿ ಕಸ ಎಸೆದು ಹೋಗುತ್ತಿರುವುದು ಕಂಡುಬರುತ್ತಿದ್ದು ಸದರಿ ಸ್ಥಳಗಳಲ್ಲಿ ಮಾರ್ಷಲ್‌ಗಳನ್ನು ನಿಯೋಜಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಮಾನ್ಯ ಸದಸ್ಯರು ವಾರ್ಡ್-136ರ ವ್ಯಾಪ್ತಿಯಲ್ಲಿ ಹಲವು ರೀತಿಯಲ್ಲಿ ಬೇಸ್ಕಾಂಗೆ ಸಂಬಂಧಿಸಿದ ದೂರುಗಳು ಬಗ್ಗೆ ತುರ್ತಾಗಿ ಕಾರ್ಯನಿರ್ವಹಿಸುವಂತೆ ಸಭೆಯಲ್ಲಿ ಕೋರಿದರು.

ಸಹಾಯಕ ಕಾರ್ಯ ಪಾಲಕ ಅಭಿಯಂಣತರರು(ಬೆಸ್ಕಾಂ) ರವರ ಪ್ರತಿನಿದಿಯು ಬೇಸಿಗೆ ಕಾಲದಲ್ಲಿ ಲೊಡ್ ಸೆಡ್ಡಿಂಗ್ ಜಾರಿಯಲ್ಲಿದ್ದು ಕೆಲವು ಕಾಲ ವಿದ್ಯುತ್ ಸರಬರಾಜಿನಲ್ಲಿ ವಿತವ್ಯಯದ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಮಾನ್ಯ ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ಬ್ಯಾನರ್-ಬಂಟಿಂಗ್ ಹಾವಳಿ ಹೆಚ್ಚಗಿದ್ದು ತೆರವುಗೊಳಿಸಲು ಸಭೆಯಲ್ಲಿ ಕೋರಿದರು.

ಮಾನ್ಯ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ಮತ್ತು ಕಂದಾಯ ಪರಿವೀಕ್ಷರು ರಂಜಾನ್ ಮತ್ತು ಇತರೆ ಹಬ್ಬಗಳಿಗೆ ಶುಭ ಕೋರಲು ಹಾಕಿದ್ದ ಬಂಟಿಂಗ್‌ಗಳನ್ನು ತೆರವುಗೊಳಿಸಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಮಾನ್ಯ ಅಧ್ಯಕ್ಷರು ವಾರ್ಡ್ 136ರ ವ್ಯಾಪ್ತಿಯಲ್ಲಿ ಮಾರ್ಷಲ್‌ಗಳು ವಿಧಿಸಿದ ದಂಡದ ವಿವರವನ್ನು ಕೋರಿದರು.

---4

ವಾರ್ಡ್-136ರ ಮಾರ್ಷಲ್ ಗಳು ಒಟ್ಟು ವಿಧಿಸಿದ ದಂಡ ರೂ. 1500 ಎಸ್‌ಡಬ್ಲ್ಯೂಎಂ. ದಂಡ ರೂ. 4000 ಎಂದು ಸಭೆಯಲ್ಲಿ ತಿಳಿಸಿದರು ಸದರಿ ಹಣವನ್ನು ಮುಖ್ಯ ಕಛೇರಿಗೆ ಸಲ್ಲಿಸಿರುತ್ತಾರೆ.

ಮಾನ್ಯ ಅಧ್ಯಕ್ಷರು ವಾರ್ಡ್ ವ್ಯಾಪ್ತಿಗೆ ಬರುವ ಆರಕ್ಷಕ ನೀರಿಕ್ಷಕರು(ವಾರ್ಡ್‌ನಲ್ಲಿ ಕಾನೂನು ಮತ್ತು ಸುವ್ಯವಸ್ಥೆ) ಪ್ರತಿನಿಧಿಯನ್ನು ವಾರ್ಡ್ ಸಂಖ್ಯೆ: 136ರಲ್ಲಿ ಜೆ.ಜೆ.ಆರ್ ನಗರ ಕಾನೂನು ಸುವ್ಯವಸ್ಥೆಯನ್ನು ಯನ್ನು ಉತ್ತಮಗೊಳಿಸಲು ಕೈಗೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ಕೋರಿದರು.

ಆರಕ್ಷಕ ನೀರಿಕ್ಷಕರು(ವಾರ್ಡ್‌ನಲ್ಲಿ ಕಾನೂನು ಮತ್ತು ಸುವ್ಯವಸ್ಥೆ) ಪ್ರತಿನಿಧಿಯು ವಾರ್ಡ್‌ನಲ್ಲಿ ಹೆಚ್ಚಿನ ಪ್ರಮಾಣದ ಅಗತ್ಯಬಿದ್ದ ಕಡೆಯಲ್ಲಿ ಸಿಸಿ ಟಿ.ವಿ ಅಳವಡಿಸಿದ್ದು ಹಾಗೂ ಮುಂದಿನ ದಿನಗಳಲ್ಲಿ ಬಿ.ಬಿ.ಎಂ.ಪಿ ವತಿಯಿಂದ ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಿನ ಸಿ.ಸಿ. ಟಿವಿಯನ್ನು ಅಳವಡಿಸಿ ಹಾಗೂ ಹೆಚ್ಚಿನ ಪೋಲೀಸ್ ಗಸ್ತನ್ನು ಹೆಚ್ಚಿಸಿ ಹಾಗೂ ಸಮಾಜದಲ್ಲಿ ಅಶಾಂತಿ ಉಂಟುಮಾಡುವ ಸಮಾಜ ಘಾತಕರನ್ನು ಸೆರೆಯಿಡಿದು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

ಮಾನ್ಯ ಅಧ್ಯಕ್ಷರು ವಾರ್ಡ್ ವ್ಯಾಪ್ತಿಗೆ ಬರುವ ಆರಕ್ಷಕ ನೀರಿಕ್ಷಕರು(ಸಂಚಾರಿ ವಿಭಾಗ) ಪ್ರತಿನಿಧಿಯನ್ನು ವಾರ್ಡ್ ಸಂಖ್ಯೆ: 136 ಜೆ.ಜೆ.ಆರ್ ನಗರ ವ್ಯಾಪ್ತಿಯ ಅವಶ್ಯಕವಾಗಿ ಕೈಗೊಳ್ಳಬೇಕಾದ ಕ್ರಮದ ಬಗ್ಗೆಸಭೆಯಲ್ಲಿ ವಿವರಣೆ ಕೋರಿದರು.

ಆರಕ್ಷಕ ನೀರಿಕ್ಷಕರು(ಸಂಚಾರಿ ವಿಭಾಗ) ಪ್ರತಿನಿಧಿಯು ವಾರ್ಡ್ ಸಂಖ್ಯೆ: 136 ಜೆ.ಜೆ.ಆರ್ ನಗರ ವ್ಯಾಪ್ತಿಯಲ್ಲಿ ಹೊಸಹಳ್ಳಿ ಮುಖ್ಯರಸ್ತೆ ಹೆಚ್. ಬಿ. ಜಿ ಮುಖ್ಯರಸ್ತೆ, ಹಾಗೂ ಮೈಸೂರು ರಸ್ತೆಗಳಲ್ಲಿ ದಿನ ನಿತ್ಯ ವಾಹನ ತಪಸಣೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ನಿಲ್ಲಿಸಿರುವ ವಾಹನಗಳನ್ನು ತೆರವುಗೊಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

ಇಂದಿನ ಸಭೆಯಲ್ಲಿ ಚರ್ಚಿಸಿದ ಹಾಗೂ ನಿರ್ಣಯಗಳನ್ನು ಕಾರ್ಯದರ್ಶಿ ಮತ್ತು ಸಂಚಾಲಕರು. ಸಭೆಯ ನಡಾವಳಿಗಳ ಪುಸ್ತಕದಲ್ಲಿ ದಾಖಲಿಸಿದರು. ವಂದನಾರ್ಪಣೆ ಮಾಡುವುದರ ಮೂಲಕ ಇಂದಿನ ಸಭೆಯನ್ನು ಮುಕ್ತಾಯಗೊಳಿಸಿದರು.

—5

Scanned with CamScanner

ದಿನಾಂಕ 07-05-2022 ರಂದು ನಡೆದ ವಾರ್ಡ್ ಕಮಿಟಿ ಸಭೆಯಲ್ಲಿ ಶ್ರೀ ಪ್ರದೀಪ್ ಮತ್ತು ಶ್ರೀ ಗುರುಮೂರ್ತಿ ( ಭಾರತೀಯ ನಾಗರಿಕ ಸಮಿತಿ ) ರವರು ಸಭೆಗೆ ಹಾಜರಾಗಿರುವ ವಾರ್ಡ್‌ನ ಬಗ್ಗೆ ಚರ್ಚಿಸಲು ಮುಂದಾಗಿದ್ದರಿಂದ ಸಭೆಯಲ್ಲಿ ಹಾಜರಾಗಿದ್ದ ವಾರ್ಡ್ -136ರ ಕಮಿಟಿ ಸದಸ್ಯರು ಮತ್ತು ಸ್ಥಳೀಯ ಎನ್.ಜಿ.ಓ. ಸದಸ್ಯರು, ಶ್ರೀ ಪ್ರದೀಪ್ ಮತ್ತು ಶ್ರೀ ಗುರುಮೂರ್ತಿ ( ಭಾರತೀಯ ನಾಗರಿಕ ಸಮಿತಿ ) ಹಾಜರಾಗಿರುವುದನ್ನು ಖಂಡಿಸಿ ಮತ್ತು ಸಭೆಯನ್ನು ತಡೆದು ಹಾಗೂ ಮುಂದಿನ ದಿನಗಳಲ್ಲಿ ಸದರಿ ಸದಸ್ಯರು ಹಾಜರಾಗಿ ಸಭೆಗೆ ಅಡ್ಡಿ ಪಡಿಸಿದಲ್ಲಿ ಸಭೆಯು ನಡೆಯುವುದಕ್ಕೆ ಬಿಡುವುದಿಲ್ಲವೆಂದು ತಿಳಿಸಿ ಸಭೆಯನ್ನು ತಡೆಯುತಿದಿರುತ್ತಾರೆ ಎಂಬುದನ್ನು ಈ ಮೂಲಕ ಸಭೆಯಲ್ಲಿ ತಿಳಿಸಿದೆ.

ಈ ಕೆಳಕಂಡ ಸಭಾ ಸದಸ್ಯರು ಹಾಗೂ ಎನ್.ಜಿ.ಓ. ಸಂಸ್ಥೆಯವರು ಸಭೆಗೆ ಹಾಜರಿದ್ದರು.

| ಕ್ರಮ ಸಂಖ್ಯೆ | ಹೆಸರು ಮತ್ತು ವಿಳಾಸ | ಸಹಿ |
|---|---|---|
| 1 | ಚಂದ್ರಶೇಖರ್ ವಿ. | [signature] |
| 2 | ರಂಜಿತ್ ಕುಮಾರ್ | [signature] |
| 3 | ಶೇಖರ್ ಸಿ. ಟಿ | Shekar |
| 4 | ಮೋಹನ್ | Mohankumar |
| 5 | ಉಮೇಶ್ | [signature] |
| 6 | ಚಂದ್ರಶೇಖರ್ | [signature] |
| 7 | [illegible] ತಾಜ್ | [signature] |
| 8 | ಧನಲಕ್ಷ್ಮಿ | Dhanalaxmi |
| 9 | ಕವಿತ | Kavitha |

Scanned with CamScanner

| ಕ್ರಮ ಸಂಖ್ಯೆ | ವಾರ್ಡ್ ಹಂತದ ಸಮಿತಿ ಹಾಗೂ ಸದಸ್ಯರುಗಳ ಹೆಸರು ಮೊಬೈಲ್ ಸಂಖ್ಯೆ | | ಸಹಿ |
|---|---|---|---|
| 1 | ಡಾ|| ಅಬ್ದುಮುಖ್ಬಿಲ್, ದೂ. 9480685654<br>ಸಹಾಯಕ ನಿರ್ದೇಶಕರು (ಪಶುಪಾಲನೆ ಪಶ್ಚಿಮ) ಬಿ.ಬಿ.ಎಂ.ಪಿ. | ವಾರ್ಡ್‌ನ ನೋಡಲ್ ಅಧಿಕಾರಿ | 7/5/22 |
| 2 | ಶ್ರೀ ಸತೀಶ್ ಕುಮಾರ್<br>ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ 136<br>ಬಿ.ಬಿ.ಎಂ.ಪಿ ದೂ. 9986740382 | ಸದಸ್ಯ ಕಾರ್ಯದರ್ಶಿ | |
| 3 | ಎಸ್. ಲಕ್ಷ್ಮಿ ನರಸಿಂಹಯ್ಯ ದೂ. 9845563157<br>ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ -136 | ಸದಸ್ಯರು | 7/5/22 |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರ(ಕಾಮಗಾರಿ) ಜೆ.ಜೆ.ಆರ್ ನಗರ ಉಪ ವಿಭಾಗದ ಪ್ರತಿನಿಧಿ<br>ಶ್ರೀ ಬಾಬು (ಕೆಲಸ ಪರಿವೀಕ್ಷಕರು) 9342582372 | ಸದಸ್ಯರು | |
| 5 | ಆರೋಗ್ಯಾಧಿಕಾರಿಗಳು, ಚಾಮರಾಜಪೇಟೆ ವಿಭಾಗ ರವರ ಪ್ರತಿನಿಧಿ. ಹಿರಿಯ ಆರೋಗ್ಯಾಧಿಕಾರಿಗಳು ಜಿ.ಎಂ. ಮುತ್ಯಾಲು ದೂ.<br>9916444041 | ಸದಸ್ಯರು | |
| 6 | ಶ್ರೀ ಉಮೇಶ್<br>ವಾರ್ಡ್ ಪ್ರದೇಶದಲ್ಲಿನ ಸ್ಥಳೀಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ ದೂ.<br>873557760 | ಸದಸ್ಯರು | |
| 7 | ಶ್ರೀ ಮೊಹಮದ್ ಮುಜಾಮೀಲ್<br>ವಾರ್ಡ್ ಪ್ರದೇಶದಲ್ಲಿನ ಸ್ಥಳೀಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ ದೂ.<br>7349649906 | ಸದಸ್ಯರು | |
| 8 | ಶ್ರೀಮತಿ ಚಂದ್ರಕಲಾ ದೂ. 8904845720<br>ಕಂದಾಯ ಪರಿವೀಕ್ಷಕರು, ವಾರ್ಡ್ ನಂ. 136 | ಸದಸ್ಯರು | W-136 |
| 9 | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ರವರ ಪ್ರತಿನಿಧಿಎಸ್. ದೂ.<br>ಲಕ್ಷ್ಮಿ ನರಸಿಂಹಯ್ಯ<br>9845563157 | ಸದಸ್ಯರು | 7/5/22 |
| 10 | ಸಹಾಯಕ ಕಾರ್ಯಪಾಲಕ ಅಭಿಯಂತರರ<br>( ಬಿಡಬ್ಲ್ಯೂ.ಎಸ್.ಎಸ್.ಬಿ) ರವರ ಪ್ರತಿನಿಧಿ<br>ಕುಮಾರ ಸ್ವಾಮಿ, ದೂ. 9060341644 | ಸದಸ್ಯರು | |
| 11 | ಸಹಾಯಕ ಕಾರ್ಯ ಪಾಲಕ ಅಭಿಯಂಣತರರು(ಬೆಸ್ಕಂ) ರವರ ಪ್ರತಿನಿಧಿ | ಸದಸ್ಯರು | |
| 12 | ಮಾಗಡಿ ರಸ್ತೆ ಸಂಚಾರ ಪೊಲೀಸ್ ಠಾಣೆ ಯ ಪ್ರತಿನಿಧಿ<br>ಶ್ರೀ ರಾಮಚಂದ್ರ ಎ. ಎ.ಎಸ್.ಐ ದೂ.9902992624 | ಸದಸ್ಯರು | |
| 13 | ಜೆ.ಜೆ.ಆರ್ ನಗರ ಪೊಲೀಸ್ ಠಾಣೆ ಯ ಪ್ರತಿನಿಧಿ | ಸದಸ್ಯರು | |
| 14 | ವಾರ್ಡ್ 136 ಮಾರ್ಷಲ್, ಮುಬೀನ್ | ಸದಸ್ಯರು | |

Sathish Kumar A

ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ: 136
ವಾರ್ಡ್ ಹಂತದ ಸಮಿತಿ

7/5/22
ಹಾಗೂ ನೋಡಲ್ ಅಧಿಕಾರಿ
ವಾರ್ಡ್ ಹಂತದ ಸಮಿತಿ, ವಾರ್ಡ್ ನಂ. 136

Scanned with CamScanner